**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1160/2023**

| | | |
|---|---|---|
| ಸಾಕ್ಷಿದಾರರ ಹೆಸರು | **ರೋಷಣಿ** | **ಫ್ರಾಸಾಃ 01** |
| ತಂದೆಯ/ಗಂಡನ ಹೆಸರು | ನಾಚಂದ್ರಮೂರ್ತಿ | **ಚಾಸಾಃ 01** |
| ವಯಸ್ಸು | 29 ವರ್ಷ | ದಿಃ 26.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |
| ಕೆಲಸ | ನಿರುದ್ಯೋಗಿ | |
| ವಾಸ | ನಂಜನಗೂಡು | |

**ಮುಖ್ಯ ವಿಚಾರಣೆ ಫ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ 2 ನನ್ನ ತಂದೆ, ಚಾಸಾ 3 ರಿಂದ 5 ರವರ ಪರಿಚಯ ಇದೆ. ದಿಃ 23.06.2023 ರಂದು ಮಧ್ಯಾಹ್ನ 12 ಗಂಟೆಯಿಂದ 12.30 ರ ಸಮಯದಲ್ಲಿ ಆಲಂಬೂರು ಗ್ರಾಮದ ಸರ್ವೆ ನಂ. 74/1 ರ 1 ಎಕರೆ 20 ಗುಂಟೆ ಜಮೀನು ನನ್ನ ತಂದೆಯ ಹೆಸರಿನಲ್ಲಿದ್ದು ಅದನ್ನು ಸರ್ವೆ ಮಾಡಿಸಲು ನಾವು ಹೋಗಿ, ಸರ್ವೆ ಮುಗಿದಿದ್ದು ನಾನು ಚಾಸಾ 2 ಮತ್ತು ನನ್ನ ಸೋದರ ಅತ್ತೆ ಚಂದ್ರಕಲಾ ಜಮೀನಿನಲ್ಲಿ ನಿಂತಿದ್ದಾಗ ಆರೋಪಿ ಗಾಡಿಯಲ್ಲಿ ಬಂದು ನನ್ನ ತಂದೆಯೊಂದಿಗೆ ಜೋರು ಜಗಳ ಮಾಡುತ್ತಿದ್ದು ನಾನು ವಿಡಿಯೋ ಮಾಡುತ್ತಿದ್ದು ನನ್ನನ್ನು ಸೂಳೆ ಮುಂಡೆ ಎಂದು ಬೈದು ನನ್ನ ಜುಟ್ಟು ಹಿಡಿದು ನನ್ನನ್ನು ನೂಕಿದ್ದು, ನನ್ನ ಫೋನ್ ಹೊಡೆದು ಹೋಗಿರುತ್ತದೆ ಮತ್ತು ನಾನು ಕೆಳಗೆ ಬಿದ್ದಿರುತ್ತೇನೆ. ನಂತರ ನಾನು ಅಲ್ಲೆ ಸುಮ್ಮನೆ ನಿಂತಿರುತ್ತೇನೆ. ಚಾಸಾ 3 ಮತ್ತು 4 ರವರು ಆ ಸಮಯದಲ್ಲಿ ಬಂದು ಜಗಳ ಬಿಡಿಸಿರುತ್ತಾರೆ. ನಂತರ ಆರೋಪಿ ಇನ್ನೊಂದು ಸಲ ಜಮೀನಿಗೆ ಬಂದರೆ ನಿಮ್ಮನ್ನು ಹಾಗೂ ನಿಮ್ಮ ಮನೆಯವರನ್ನು ಸಾಯಿಸುತ್ತೇನೆ ಎಂದು ನನಗೆ ಹೇಳಿರುತ್ತಾರೆ. ಆರೋಪಿಯು ಆ ಜಮೀನು ಅಕ್ಕ ಮತ್ತು ಭಾವನ ಜಮೀನು ಎಂದು ಹೇಳಿರುತ್ತಾರೆ.

ನಂತರ ನಾನು ದಿಃ 12.07.2023 ರಂದು ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ನೀಡಿರುತ್ತೇನೆ. ನಮ್ಮ ತಂದೆಗೆ ಆರೋಗ್ಯ ಸರಿಯಿಲ್ಲದ ಕಾರಣ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆಗೆ ದಾಖಲಾಗಿದ್ದ ಕಾರಣ ದೂರನ್ನು ವಿಳಂಬವಾಗಿ ನೀಡಿದ್ದೇನೆ.

ದಿಃ 14.07.2023 ರಂದು ಪೊಲೀಸರು ಕೃತ್ಯ ಸ್ಥಳಕ್ಕೆ ಬಂದಾಗ ನಾನು ಕೃತ್ಯ ಸ್ಥಳವನ್ನು ಪೊಲೀಸರಿಗೆ ತೋರಿಸಿಕೊಟ್ಟ ಮೇರೆಗೆ ಪೋಲಿಸರು ಕೃತ್ಯ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದು ಆಗ ನನ್ನೊಂದಿಗೆ ಚಾಸಾ 5 ಮತ್ತು 6 ರವರು ಹಾಜರಿದ್ದರು. ಸದರಿ ಮಹಜರ್ ಅನ್ನು ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ಮಾಡಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆಯನ್ನು ಪೊಲೀಸರಿಗೂ ಹಾಗೂ ನ್ಯಾಯಾಧೀಶರ ಮುಂದೆ ನೀಡಿರುತ್ತೇನೆ.

ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ. 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ. 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಎನ್.ಯು ವಕೀಲರಿಂದಃ

ನಂಜನಗೂಡು ಪಟ್ಟಣದ ಗೌರಿಪೇಟೆ ಬೀದಿಯ ಸಿ ರತ್ನಮ್ಮ ನನ್ನ ತಂದೆಯ ತಾಯಿ ಅಂದರೆ ನನ್ನ ಅಜ್ಜಿ. ಮಹದೇವಮ್ಮ ನಮ್ಮ ಮನೆಯ ಕೆಲಸದವರು. ಮಲ್ಲಮ್ಮ ನನ್ನ ಅಜ್ಜಿಯವರ ತಾಯಿ. ಸರ್ವೆ ನಂ. 74/1 ಮೂಲತಃ ನಮ್ಮ ಅಜ್ಜಿ ರತ್ನಮ್ಮ ರವರಿಗೆ ಸೇರಿದ್ದಾಗಿರುತ್ತದೆ. ಮಲ್ಲಮ್ಮನವರು ನಮ್ಮ ಅಜ್ಜಿಯೊಂದಿಗೆ ವಾಸಮಾಡುತ್ತಿದ್ದರು ಎಂದರೆ ಸರಿ. ಬೋರಮ್ಮ ರತ್ನಮ್ಮನವರ ಅಜ್ಜಿ. ನಾನು ಬಿ.ಇ ವ್ಯಾಸಾಂಗ ಮಾಡಿದ್ದೇನೆ. ಸಾಕ್ಷಿಗೆ ಒಂದು ಆರ್.ಟಿ.ಸಿ ಯನ್ನು ತೋರಿಸಲಾಗಿ ಅದರಲ್ಲಿ ಆರೋಪಿಯವರ ಸಂಬಂಧಿಕರ ಹೆಸರು ಇದೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳಿರುತ್ತಾರೆ. ಸರ್ವೆ ನಂ. 74/1 ಜಮೀನಿನ ಬಗ್ಗೆ ಮೊದಲಿನಿಂದಲೂ ನನಗೆ ಸಂಪೂರ್ಣ ಮಾಹಿತಿ ಇದೆ. **ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಕಾಣಿಸುವ ಮಲ್ಲಮ್ಮ ತನ್ನ ಅಜ್ಜಿಯ ತಾಯಿ ಎಂದು ಒಪ್ಪಿಕೊಂಡಿರುತ್ತಾರೆ. ಆ ಕಾರಣಕ್ಕಾಗಿ ಸದರಿ ದಾಖಲೆಯನ್ನು ನಿ.ಡಿ.**

**1 ಎಂದು ಗುರುತಿಸಲಾಯಿತು.** ಸದರಿ ದಾಖಲೆಯಂತೆ ಎಲ್.ಆರ್.ಎಫ್. ಸಂಖ್ಯೆ 3076/76-77 ರಂತೆ ಸದರಿ ಜಮೀನು ಆರೋಪಿಯ ಸಂಬಂಧಿಕರಿಗೆ ಸರ್ಕಾರದಿಂದ ಮಂಜೂರಾಗಿದ್ದು ಆ ಬಗ್ಗೆ ನನ್ನ ಸಂಬಂಧಿ ಮಲ್ಲಮ್ಮ ರವರು ಹಣ ಪಡೆದಿರುತ್ತಾರೆ ಎಂದರೆ ಸರಿ. ಸದರಿ ಹಣವನ್ನು ಆರೋಪಿಯ ಸಂಬಂಧಿಕರು ಮಲ್ಲಮ್ಮನವರಿಗೆ ನೀಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಸಂಬಂಧವಾಗಿ ಸರ್ವೆ ನಂ. 74/1 ಆರೋಪಿಗಳ ಸಂಬಂಧಿಕರಾದ ಮಸಣಶೆಟ್ಟಿ ಮಾದಶೆಟ್ಟಿ ರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. **ಸಾಕ್ಷಿ ಎರಡು ಆರ್.ಟಿ.ಸಿ ಗಳನ್ನು ನೋಡಿ ಗುರುತಿಸಿದ್ದು, ಆ ಮೇರೆಗೆ ಅವುಗಳನ್ನು ನಿ.ಡಿ. 2 ಮತ್ತು 3 ಎಂದು ಗುರುತಿಸಲಾಯಿತು.**

**ಪಾಟೀ ಸವಾಲುಃ** ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸ.ಇದೆ.ಎಂ.ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಲಯ, ನಂಜನಗೂಡು**